ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

O.S. ನಂಬರಃ 47/2017

ಡಿ. ಡಬ್ಲ್ಯೂಃ 5

ದಿಃ 17-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಸತ್ಯವಿಜಯ ನಾಯಕ |
| ತಂದೆಯ ಹೆಸರುಃ | ಹೊಸಬಣ್ಣ ನಾಯಕ |
| ವಯಸ್ಸುಃ | 73 ವರ್ಷ |
| ಉದ್ಯೋಗಃ | ವಕೀಲರು |
| ವಿಳಾಸಃ | ಅಂಕೋಲಾ. |

ಮುಖ್ಯ ವಿಚಾರಣೆಃ 1ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್.ಯು.ಎ ಇವರಿಂದಃ

ನಿಡಿ-2 ನ್ನು ನಾನೇ ಹೇಳಿ ಬರೆಸಿರುತ್ತೇನೆ. ಸಾಕ್ಷಿಯು ನಿಡಿ-2 ರ ಮೇಲಿರುವ ತಮ್ಮ ಸಹಿ ಮತ್ತು ಸೀಲನ್ನು ಗುರುತಿಸಿದ್ದು, ಅವುಗಳನ್ನು ನಿಡಿ-2ಬಿ, ನಿಡಿ-2ಸಿ ಎಂದು ಗುರುತಿಸಲಾಯಿತು. ನಿಡಿ-3 ನ್ನು ವಾದಿಯರು ಬರೆದುಕೊಟ್ಟಿರುವ ದಾಖಲೆಯಾಗಿದ್ದು, ಅದರ ಮೇಲಿರುವ ನನ್ನ ಸಹಿ ಮತ್ತು ಸೀಲನ್ನು ಗುರುತಿಸುತ್ತೇನೆ. ಅವುಗಳನ್ನು ನಿಡಿ-3ಬಿ ಮತ್ತು ನಿಡಿ-3ಸಿ ಎಂದು ಗುರುತಿಸಲಾಯಿತು. ವಾದಿಯರು ಮಾಹಿತಿ ಕೊಟ್ಟು ಬರೆಸಿದ್ದು, ಅದಕ್ಕೆ ನಾನು ಸಹಿಯನ್ನು ಹಾಕಿರುತ್ತೇನೆ. ನಿಡಿ-3 ದಾಖಲಾತಿಯನ್ನು ನಮ್ಮ ಕಚೇರಿಯಲ್ಲಿ ಟೈಪ್ ಮಾಡಲಾಗಿದೆ. ನಿಡಿ-7 ದನ್ನು ಅವರೇ ಟೈಪ್ ಮಾಡಿಸಿಕೊಂಡು ಬಂದದ್ದು, ನಾನು ಓದಿ ಹೇಳಿದ್ದು, ಅವರು ಸರಿ ಇದೆ ಎಂದು ಹೇಳಿ ಹಣ ಮುಟ್ಟಿದೆ ಎಂದು ಸಹಿಯನ್ನು ಹಾಕಿರುತ್ತಾರೆ. ಸಾಕ್ಷಿಯು ನಿಡಿ-7 ರ

ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ-7ಸಿ ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ವಾದಿಯರ ಪರ ವಕೀಲರಾದ ಶ್ರೀ ಎಂ.ಪಿ.ಬಿ ಇವರಿಂದಃ

2. ಈ ಪ್ರಕರಣದಲ್ಲಿ ವಾದಿಯರನ್ನು ನೋಡಿರುತ್ತೀರಾ ಎಂದರೆ ಸಾಕ್ಷಿಯು ವಾದಿಯರು ಯಾರು ಎಂದು ಗೊತ್ತಿರುವುದಿಲ್ಲ, ಅವರ ಹೆಸರಿನವರು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಅಂಕೋಲಾದಲ್ಲಿ ಎಸ್ ಬಿ ಐ ಹತ್ತಿರ ಎಷ್ಟು ವರ್ಷಗಳತನಕ ನಿಮ್ಮ ಕಚೇರಿ ಇತ್ತು ಎಂದರೆ ಸಾಕ್ಷಿಯು 2016ನೇ ವರ್ಷದತನಕ ಇತ್ತು ಎಂದು ನುಡಿಯುತ್ತಾರೆ. ನಿಮ್ಮ ಮನೆ ಎಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಬೋಳೇ ಗ್ರಾಮದಲ್ಲಿ ಎಂದು ನುಡಿಯುತ್ತಾರೆ. ಬೋಳೆ ಹಾಗೂ ಅಂಕೋಲಾ ಬೇರೆ ಬೇರೆ ಎಂದರೆ ಸರಿ. ಸಹಿ ಮಾಡಿರುತ್ತಾರೆ ಎಂದು ಹೇಳುವ ಮಹಿಳೆಯರು ಎಲ್ಲಿ ಬಂದಿದ್ದರು ಎಂದರೆ ಸಾಕ್ಷಿಯು ನಮ್ಮ ಮನೆಯಲ್ಲಿರುವ ಕಚೇರಿಗೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಗಳಲ್ಲಿ ನಿಮ್ಮ ಮನೆಯಲ್ಲಿ ಕಚೇರಿ ಇದೆ ಎಂದು ನಮೂದು ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ವಕೀಲರು ದಾಖಲಾತಿಗಳನ್ನು ಬರೆದರೆ ಅದರ ಮೇಲೆ ದಸ್ತೂರ ಎಂದು ಹಾಕುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನೀವು ಗುರುತಿಸಿದ ದಾಖಲಾತಿಗಳಲ್ಲಿ ಏನಾದರೂ ಓದಿ ಹೇಳಿ ಒಪ್ಪಿಕೊಳ್ಳಲಾಯಿತು ಎಂದು ನಮೂದು ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಮೂರು ಜನ ಮಹಿಳೆಯರಿಗೆ ಓದಲು ಹಾಗೂ ಬರೆಯಲು ಬರುತ್ತಿತ್ತಾ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿರುವುದಿಲ್ಲ, ಅದನ್ನು ನಾನು ಓದಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ-2 ಜಿ ಪಿ ಎ ಮೇಲೆ ಅಂಕೋಲಾದಲ್ಲಿ ಬರೆಯಲಾಯಿತು ಎಂದು ನಮೂದು

ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಡಿ-2 ರಲ್ಲಿ the contents are read over and explained to ಎಂದು ನಮೂದು ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಜಿ ಪಿ ಎ ಬರೆದುಕೊಟ್ಟವರು ಹಾಗೂ ಪ್ರತಿವಾದಿಯರು ಬೇರೆ ಸಮುದಾಯ ಹಾಗೂ ಬೇರೆ ಕುಟುಂಬದವರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ 3 ದಾಖಲಾತಿಗಳಲ್ಲಿ ಯಾರು ಬೆರಳಚ್ಚು ಮಾಡಿರುತ್ತಾರೆ ಹಾಗೂ ಡ್ರಾಪ್ಟ ಮಾಡಿರುತ್ತಾರೆ ಎಂದು ಎಲ್ಲಿಯೂ ಸಹ ನಮೂದು ಇರುವುದಿಲ್ಲ ಎಂದರೆ ಸರಿ. ನೋಟರಿ ಕಾಯ್ದೆಯಡಿಯಲ್ಲಿ ನೀವೇ ಎಕ್ಸಿಕ್ಯೂಟ್ ಮಾಡಿರುವ ದಾಖಲಾತಿಗಳ ಮೇಲೆ ನೀವೇ ಸಹಿಯನ್ನು ಮಾಡಲು ಆಗುವುದಿಲ್ಲ ಎಂದರೆ ಹಾಗೆ ಏನೂ ಇರುವುದಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಕಾಲದಲ್ಲೂ ಸಹ ವಾದಿಯರು ನಿಮ್ಮ ಸಮಕ್ಷಮದಲ್ಲಿ ಮೇಲೆ ಹೇಳಿದ ದಾಖಲಾತಿಗಳನ್ನು ಬರೆದು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಮಾತನ್ನು ಕೇಳಿಕೊಂಡು ದಾಖಲಾತಿಗಳ ಮೇಲೆ ಸಹಿ ಮತ್ತು ಸೀಲನ್ನು ಹಾಕಿ ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಏನೂ ಅರಿಯದ ವಾದಿಯರಿಗೆ 1ನೇ ಪ್ರತಿವಾದಿಯು ವಾರಸಾ ಮಾಡುತ್ತೇನೆ ಎಂದು ಹೇಳಿಕೊಂಡ ಅವರ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನೋಟರಿ ಕಾಯ್ದೆಯಡಿಯಲ್ಲಿ ನಿಮ್ಮ ಸಮಕ್ಷಮ ಯಾರು ಎಕ್ಸಿಕ್ಯೂಟ್ ಹಾಗೂ ಸಹಿ ಮಾಡುತ್ತಾರೋ ಅವರ ಹೆಸರು ರಜಿಸ್ಟರಿನಲ್ಲಿ ನಮೂದು ಇರುತ್ತದೆ ಎಂದರೆ ಸರಿ. ನೀವು ಹಾಗೂ ಪ್ರತಿವಾದಿಯರು ಸೇರಿಕೊಂಡು ಅನಕ್ಷರಸ್ಥ ವಾದಿಯರಿಗೆ ಮೋಸ ವ ವಂಚನೆ ಮಾಡುವ ಉದ್ದೇಶದಿಂದ ಸುಳ್ಳು ಕಾಗದ ಪತ್ರಗಳನ್ನು ತಯಾರಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಮತ್ತು 2ನೇ ಪ್ರತಿವಾದಿ ತಂದೆ ಮಗ ಎಂದರೆ ಸಾಕ್ಷಿಯು ಗೊತ್ತಿರುವುದಿಲ್ಲ. ವಾದಿಯರು ಎಂದಿಗೂ ಸಹ ನಿಮ್ಮ ಸಮಕ್ಷಮ ಹೆಬ್ಬೆಟ್ಟಿನ ಗುರುತಾಗಲಿ ಅಥವಾ

ಸಹಿಯಾಗಲಿ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಪ್ರತಿಯೊಂದು ದಾಖಲಾತಿಗಳ ಮೇಲೆ ಯಾರು ಹಾಗೂ ಎಲ್ಲಿ ತಯಾರು ಮಾಡಿರುತ್ತಾರೆ ಎಂದು ಬರೆಯಲಾಗುತ್ತದೆ ಎಂದರೆ ಸಾಕ್ಷಿಯು ನನ್ನ ಅನುಭವದ ಪ್ರಕಾರ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಸಮಕ್ಷಮ ಹಣವನ್ನು ವಾದಿಯರಿಗೆ ಕೊಟ್ಟ ಬಗ್ಗೆ ನೋಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.